## ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

**ಎಸ್.ಸಿ. ಸಂಖ್ಯೆ 3/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಪಾರ್ಸಮಲ್ ಪಿ ಜೈನ್ | ಪಿಡಬ್ಲ್ಯೂ : 2 |
| ತಂದೆಯ / ಗಂಡನ ಹೆಸರು | : ಡಿ.ಪೂರಣ್ ಮಲ್ ಜೈನ್ | |
| ವಯಸ್ಸು | : 41 ವರ್ಷ | |
| ಉದ್ಯೋಗ | : ಪೋಟೋ ಮತ್ತು ಪ್ರಿಂಟಿಂಗ್ ವ್ಯಾಪಾರ | |
| ವಾಸಸ್ಥಳ | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ 18.05.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

ಮುಖ್ಯ ವಿಚಾರಣೆ ಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ

1. ಕಳೆದ 17 ವರ್ಷಗಳಿಂದ ನಾನು ಪೋಟೋ ತೆಗೆಯುವ ಮತ್ತು ಪ್ರಿಂಟಿಂಗ್ ಮಾಡುವ ವ್ಯಾಪಾರವನ್ನು ಮಾಡಿಕೊಂಡು ಬಂದಿದ್ದೇನೆ. ನನ್ನ ಅಂಗಡಿ ಮೈಸೂರಿನ ವಿದ್ಯಾರಣ್ಯಪುರಂ ನಲ್ಲಿ ಇದೆ. ಅದರ ಹೆಸರು **P–5 *India*** ಎಂದು. 17 ವರ್ಷಗಳಿಂದ ನನಗೆ ಪೋಟೋ ತೆಗೆಯುವ ಮತ್ತು ಪ್ರಿಂಟಿಂಗ್ ಮಾಡುವ ಅನುಭವ ಇರುತ್ತದೆ. ನನ್ನ ಬಳಿ **Canon DS** 126941 ಕ್ಯಾಮರಾ ಇರುತ್ತದೆ. ಪ್ರಿಂಟ್ ತೆಗೆಯಲು ನನ್ನಲ್ಲಿ **Konica Minolta printer** ಇದೆ. **Dell** ಲ್ಯಾಪ್ ಟಾಪ್ ಇರುತ್ತದೆ.

2. ದಿಃ 14.05.2024 ರಂದು ಈ ನ್ಯಾಯಾಲಯದಲ್ಲಿ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಳ್ಳಲಾದ ಚಿನ್ನದ ಆಭರಣಗಳು, ಮೊಬೈಲ್ ಮತ್ತು ನಗದು ಹಣ ಗಳ ಪೋಟೋಗಳನ್ನು ತೆಗೆದು ಪ್ರಿಂಟ್ ಮಾಡಿಸಿ ಕೊಟ್ಟಿರುತ್ತೇನೆ. ಸದರಿ ಪೋಟೋಗಳನ್ನು

ಈಗ ನೋಡುತ್ತಿದ್ದೇನೆ. ಅವುಗಳನ್ನು ಈಗಾಗಲೇ ನಿಪಿ 1 ರಿಂದ 14 ಎಂದು ಗುರುತುಪಡಿಸಿಕೊಳ್ಳಲಾಗಿದೆ. ಆ ಪೋಟೋಗಳನ್ನು ಪೆನ್ ಡ್ರೈವ್ ಗೆ ಹಾಕಿ ಪೆನ್ ಡ್ರೈವ್ ನ್ನು ಈ ದಿನ ಹಾಜರುಪಡಿಸುತ್ತಿದ್ದೇನೆ. ಅದನ್ನು ಎಂ ಒ 15 ಎಂದು ಗುರುತುಪಡಿಸಿಕೊಳ್ಳಲಾಯಿತು.

3. ಈ ಬಗ್ಗೆ ನಾನು ಕಲಂ 65(ಬಿ) ಭಾರತ ಅಧಿ ನಿಯಮದ ಸಾಕ್ಷ್ಯದಡಿಯಲ್ಲಿ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ 15 ಎಂದು ಗುರುತುಪಡಿಸಿಕೊಳ್ಳಲಾಯಿತು. ಅದರ ಮೇಲೆ ಇರುವ ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತುಪಡಿಸಿಕೊಳ್ಳಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇ ಎ ಒ**

**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು**
**ಮೈಸೂರು.**